ಪ್ರಬಂಧ



ಲಕ್ಷ್ಮಣ ಬಾದಾಮಿ

# ಮೇಕಿಂಗ್ ಆಫ್ ಮುಖವರ್ಣ

'ಕೇಳಿ ಕಲಿ, ನೋಡಿ ಕಲಿ, ಮಾಡಿ ಕಲಿ' ಅನ್ನೋ ಕಲಿಕೆಯ ವಿಧಾನಗಳಲ್ಲಿ 'ನೋಡಿ ಕಲಿ'ಯುವುದು ನನಗೆ ಸುಲಭ ಅನ್ನಿಸಿತೋ ಅಥವಾ ಅದು ನನ್ನ ಮೇಲೆ ಪರಿಣಾಮ ಬೀರಿತೋ ತಿಳಿಯದು; 'ನೋಡಿ ಕಲಿ'ಯುವಂಥ ಪ್ರಕ್ರಿಯೆಗಳು ನನಗೆ ಇಷ್ಟವಾಗತೊಡಗಿದ್ದಂತೂ ನಿಜ. ಚಿತ್ರಕಲೆ ಅಧ್ಯಯನದ 'ಡಿಎಂಸಿ 1'ನೇ ವರ್ಷದಲ್ಲಿ 'ವಸ್ತು ಚಿತ್ರಣ', 'ಡಿಎಂಸಿ 2'ನೇ ವರ್ಷದಲ್ಲಿ ಸ್ಥಿರ ಚಿತ್ರಣಗಳ ರಚನೆ ನನಗೆ ತುಂಬ ಇಷ್ಟವೂ ಸುಲಭವೂ ಅನ್ನಿಸಿತು. ಅದಕ್ಕೆ ಕಾರಣ, ಚಿತ್ರಿಸಬೇಕಾದ ವಸ್ತುಗಳು ಎದುರಿನಲ್ಲಿ ಇರುತ್ತಿದ್ದವು. ಅವುಗಳನ್ನು ನೋಡಿ ಯಥಾವತ್ತಾಗಿ ರಚಿಸುವುದರಲ್ಲಿ ಹೆಚ್ಚಿನ ಶ್ರಮವೇನೂ ಬೇಕಿರಲಿಲ್ಲ. ಅದೇ ರೀತಿ, ನೋಡಿ ರಚಿಸುವ ಇನ್ನೊಂದು ವಿಷಯ ನಿಸರ್ಗ ಚಿತ್ರಣ. ವಿಚಿತ್ರವೆಂದರೆ ಚಿತ್ರಿಸಬೇಕಾದ ಎಲೆ, ಹೂವುಗಳನ್ನೊಳಗೊಂಡ ಟೊಂಗೆ ಕೈಯಲ್ಲಿಯೇ ಇರುತ್ತಿದ್ದರೂ ಆ ವಿಷಯ ಯಾಕೆ ನನ್ನ ಕೈ ಹಿಡಿಯಲಿಲ್ಲವೋ ನನಗಿನ್ನೂ ಅರ್ಥವಾಗಿಲ್ಲ. ನಿಸರ್ಗ ಚಿತ್ರಣದ ಮುಂದಿನ ಭಾಗವಾದ ಭೂದೃಶ್ಯ(Land Scape)ಗಳಲ್ಲಿ ನಾನು ಕಡಿದು ಕಟ್ಟೆ ಹಾಕಿದ್ದು ಅಷ್ಟಕಷ್ಟೇ. ಇಲ್ಲಿ ಕಟ್ಟಡದ ವಾಸ್ತು ವಿನ್ಯಾಸಗಳನ್ನು ತಕ್ಕಮಟ್ಟಿಗೆ ರಚಿಸುತ್ತಿದ್ದೆ. ಅವುಗಳಲ್ಲಿ ಗಿಡ-ಮರ ಪ್ರಕೃತಿ ಬಂದರೆ ಆಯ್ತು, ಮೊಸರು ಚೆಲ್ಲಿದಂತೆ ಹಸಿರು ಬಣ್ಣ ಹಾಕಿ ಕೈಬಿಡುತ್ತಿದ್ದೆ. ಆಮೇಲೆ ನೋಡಿದರೆ ಅದು ಬೆಕ್ಕು ಕಾರಿಕೊಂಡಂತೆ ಕಾಣುತ್ತಿತ್ತು!

ಒಳಾಂಗಣದಲ್ಲಿ ನೋಡಿ ರಚಿಸುವ ಚಿತ್ರಣ ಮುಂದಿನ ತರಗತಿಗಳಲ್ಲಿ, 3ನೇ ವರ್ಷದ 'ಡ್ರಾಯಿಂಗ್ ಅಂಡ್ ಪೇಂಟಿಂಗ್'ನಲ್ಲಿ ಭಾವಚಿತ್ರ ರಚನೆ ಮಾಡಬೇಕಿತ್ತು. ಇದು ನನಗೆ ಹೆಚ್ಚು ಆಸಕ್ತಿದಾಯಕವೆನಿಸಿತು. ಎದುರು ಕುಳಿತ ವ್ಯಕ್ತಿಯ ಮುಖದಲ್ಲಿನ ಭಾವ, ಬೆಳಕು, ನೆರಳು ಅವನ/ಳ ಅವಯವಗಳನ್ನು ಪ್ರಮಾಣಬದ್ಧವಾಗಿ ಅಲ್ಲಿ ರಚಿಸಬೇಕಿತ್ತು. ಎದುರಿನ ವ್ಯಕ್ತಿಯ ರೂಪ ಯಥಾವತ್ತಾಗಿ ಬರಬೇಕೆಂದು ಕಟ್ಟುನಿಟ್ಟು ಇರಲಿಲ್ಲ. ಆದರೆ, ನಾನು ನೆರಳು-ಬೆಳಕಿನೊಂದಿಗೆ ಚಿತ್ರಿಸುತ್ತಲೇ ಎದುರಿನ ವ್ಯಕ್ತಿಯ ತದ್ರೂಪವನ್ನು ರಚಿಸುವುದರಲ್ಲಿ ನಿರತನಾಗುತ್ತಿದ್ದೆ. ಆ ದಿನಗಳಲ್ಲಿ ತರಗತಿಯಲ್ಲಿ ಭಾವಚಿತ್ರ ಬಿಡಿಸುತ್ತಿದ್ದಾಗ ಎಲ್ಲ ಸಹಪಾಠಿಗಳು ಕುತೂಹಲದಿಂದ ನನ್ನ ಭಾವಚಿತ್ರವನ್ನು ನೋಡುತ್ತಿದ್ದರು. ನೋಡಿ ಬರೆಯುವ ವಿಷಯಗಳು ನನಗೆ ತುಂಬಾ